ಸಿ.ಸಿ .ನಂ. 14/2023 ಪಿಡಬ್ಲೂಃ 1

ದಿನಾಂಕಃ 12-02-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಆರೋಪಿಯ ಪರವಾಗಿಃ ಶ್ರೀ ವಾಯ್ ಆರ್ ಎಮ್ ವಕೀಲರಿಂದಃ**

4. ಆರೋಪಿ ಪಡೆದಿರುವ ಎರಡು ಸಾಲಗಳು ವೇತನ ಆಧಾರದ ಸಾಲಗಳು . ಒಂದೇ ದಿನ ಅರ್ಜಿಗಳನ್ನು ಕೊಟ್ಟಿದ್ದಾರೆ . ನಿಪಿ-10 ರಲ್ಲಿರುವ ದಿನಾಂಕ 27-06-2017 ಎಂದರೆ ಸರಿ . ನಿಪಿ-9 ರಲ್ಲಿ ದಿನಾಂಕಃ 23-06-2017 ಇದೆ ಎಂದರೆ ಸಾಕ್ಷಿ ಅದು ಸಾಲದ ಅರ್ಜಿ ಅಲ್ಲ , ಪರಿಶೀಲನಾ ಅರ್ಜಿ ಎಂದು ನುಡಿದಿರುತ್ತಾರೆ. ನಿಪಿ-10 ರಲ್ಲಿಯೂ ಕೂಡ ದಿಃ 23-06-2017 ಆಗಬೇಕಿತ್ತು ಆದರೆ ಕ್ಲೆರಿಕಲ್ ಮಿಸ್ಟೇಕ್ ಆಗಿದೆ . ದಿನಾಂಕವನ್ನು ನಮ್ಮ ಸಿಬ್ಬಂದಿಯವರು ಬರೆದಿದ್ದಾರೆ ಎಂದರೆ ಸರಿ . ಸಾಲದ ಅರ್ಜಿಗೆ ಸಂಬಂಧಪಟ್ಟಂತೆ ಆ ಸಂದರ್ಭದಲ್ಲಿ ಡಿಮಾಂಡ ಪ್ರಾಮಿಸರಿ ನೋಟ್ , ಕರಾರು, ಮುದ್ದತ್ತು ವಚನ ಪತ್ರ ಪಡೆದುಕೊಂಡಿದ್ದೇವೆ . ಆ ದಾಖಲಾತಿಗಳನ್ನು ಮಿಟಿಂಗ್ ಆದ ನಂತರ ಸಾಲ ಮಂಜೂರು ಆದ ನಂತರ ಪಡೆದುಕೊಂಡಿರುತ್ತೇವೆ . ಯಾವ ದಿನಾಂಕದಂದು ಪಡೆದಿದ್ದಾರೆ ದಿನಾಂಕ ಈಗ ಹೇಳಲು ಸಾಧ್ಯವಿಲ್ಲ. ಆ ಸಂದರ್ಭದಲ್ಲಿ ಸಾಲಕ್ಕೆ ಸಂಬಂಧಪಟ್ಟಂತೆ ಅವರ ವೇತನ ಪ್ರಮಾಣ ಪತ್ರ , ಅವರ ಕಟಾವು ದೃಢಿಕರಣ ಪತ್ರ ಪಡೆದುಕೊಂಡಿದ್ದೇವೆ . ಸಾಲದ ಅರ್ಜಿ ತೆಗೆದುಕೊಳ್ಳಬೇಕಾದರೆ ಆ ದಾಖಲಾತಿಗಳನ್ನು ಪಡೆದಿದ್ದೇವೆ . ಆ ರೀತಿಯ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿ . ಸಾಲಕ್ಕೆ ಸಂಬಂಧಪಟ್ಟಂತೆ ಆ ರೀತಿ ದಾಖಲಾತಿಗಳನ್ನು ಪಡೆದುಕೊಂಡಿದ್ದರೆ ಅದನ್ನು ನ್ಯಾಯಾಲಯದಲ್ಲಿ ಹಾಜರು ಪಡಿಸಲು ತೊಂದರೆ ಇಲ್ಲ ಎಂದರೆ ಸರಿ . ನಮ್ಮ ಪ್ರಕಾರ ಸಾಲದ ಅರ್ಜಿಯ ನಿಖರವಾದ ದಿನಾಂಕಃ 23-06-2017. ವಿದ್ಯಾ ನಾಗೇಶ ಶೇಟ್ ಇವರು ಸಾಲಕ್ಕೆ ಜಾಮೀನುದಾರರಾಗಿರುತ್ತಾರೆ .

5. ಸಾಲದ ಅರ್ಜಿಯಲ್ಲಿ ಜನಮಕ್ಕಿ , ಹೆಗಡೆ , ಕುಮಟಾ ಎಂದು ತೋರಿಸಿರುವುದು 1 ನೇ ಜಾಮೀನುದಾರರ ನಿಖರವಾದ ವಿಳಾಸ ಅಲ್ಲ , ಅದು ಅವರು ಕೊಟ್ಟಿರುವ ವಿಳಾಸ . ವಸೂಲಿಗೆ ನಾನು

ಹೋಗುವುದಿಲ್ಲ , ಸುಪರವೈಜರ್ ಹೋಗುತ್ತಾರೆ, ಕಾರಣ ನನಗೆ ನಿಖರವಾದ ವಿಳಾಸ ಗೊತ್ತಿಲ್ಲ, ಆದರೆ ಅವರು ಹೆಗಡೆಯವರು . ಹೆಗಡೆ ಗ್ರಾಮ ಇದು 5 ರಿಂದ 6 ಸಾವಿರ ಜನರು ವಾಸಿಸುವ ಊರು ಎಂದರೆ ಇರಬಹುದು . ಹೆಗಡೆಯಲ್ಲಿ ತಾರಿಬಾಗಿಲು, ಜನಮಕ್ಕಿ ಎಂಬ ಹಲವಾರು ಗ್ರಾಮಗಳಿವೆ , ಬೇರೆ ಬೇರೆ ಸಾಕೀನಗಳು ಇವೆ ಎಂದರೆ ಸರಿ . ಬ್ಯಾಂಕನಿದ ಅಥವಾ ವಕೀಲರ ಮೂಲಕ ನೋಟಿಸನ್ನು ನೀಡುವಾಗ ಪೋಸ್ಟ ಹಾಗೂ ಸಾಕೀನ ನಿಖರವಾಗಿ ಬರೆಯಬೇಕಾಗುತ್ತದೆ ಎಂದರೆ ಸರಿ . ಸಾಕೀನ ಅಥವಾ ಪೋಸ್ಟ ನಿಖರವಾಗಿ ಇರದಿದ್ದರೆ ಆ ಪೋಸ್ಟ ಆ ವ್ಯಕ್ತಿಗೆ ಜಾರಿಯಾಗುವುದಿಲ್ಲ ಎಂದರೆ ಸರಿ . ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಸಾಲಗಾರರಿಗೂ ಜಾಮೀನುದಾರರಿಗೆ ನೋಟಿಸನ್ನು ನೀಡಿದ್ದೇವೆ . ಬ್ಯಾಂಕಿನ ಮೂಲಕ ಹಲವಾರು ಬಾರಿ ನೋಟಿಸನ್ನು ನೀಡಿದ್ದೆವು . ವಕೀಲರ ಮೂಲಕ ಚೆಕ್ ಬೋನ್ಸ ಕೇಸಿನಲ್ಲಿ ನೋಟಿಸನ್ನು ನೀಡಿದ್ದೇವೆ . ನಾವು ಶಾಂತಿಕಾಂಬಾ ದೇವಸ್ಥಾನ ಹತ್ತಿರ ಹೆಗಡೆ ಎಂಬ ವಿಳಾಸಕ್ಕೆ ನೋಟಿಸು ನೀಡಿದ್ದೇವೆ ಎಂದರೆ ಸರಿ . ಸಾಲಗಾರರ ವಿಳಾಸ ಜನಮಕ್ಕಿ , ಹೆಗಡೆ ಎಂದು ಇದೆ ಎಂದರೆ ಸಾಕ್ಷಿ ಮೊದಲು ಅವರು ಅದೇ ಮಾಹಿತಿ ಕೊಟ್ಟಿದ್ದರು ಎಂದು ನುಡಿದಿರುತ್ತಾರೆ . ಜನಮಕ್ಕಿ, ಹೆಗಡೆ ವಿಳಾಸಕ್ಕೆ ನಾವು ವಕೀಲರ ಮೂಲಕ ನೋಟಿಸನ್ನು ನೀಡಿಲ್ಲ. ಸಾಲ ನೀಡುವ ಸಂದರ್ಭದಲ್ಲಿ ಸಾಲಗಾರರಿಂದ ಅವರ ಆಧಾರ ಕಾರ್ಡನ್ನು ಪಡೆದುಕೊಂಡಿದ್ದೇವೆ . ಸಾಲದ ಅರ್ಜಿಯಲ್ಲಿ ಹೇಳಿರುವ ವಿಳಾಸಕ್ಕೆ ವಕೀಲರ ಮೂಲಕ ನೋಟಿಸನ್ನು ನೀಡಲು ತೊಂದರೆ ಇತ್ತು , ಏಕೆಂದರೆ ಆಧಾರ ಕಾರ್ಡನಲ್ಲಿರುವ ವಿಳಾಸ ಹಾಗೂ ಸಾಲದ ಅರ್ಜಿಯಲ್ಲಿರುವ ವಿಳಾಸ ಬೇರೆ ಬೇರೆ ಇತ್ತು . ಆರೋಪಿಯ ಆಧಾರ ಕಾರ್ಡನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ಆಧಾರ ಕಾರ್ಡನಲ್ಲಿ ನೋಟಿಸ ಕೊಟ್ಟ ಹೆಗಡೆ ವಿಳಾಸ ಇದೆ . ನಾವು ಸಾಲಗಾರರಿಗೆ ಸಂಬಂಧಪಟ್ಟಂತೆ ವಕೀಲರ ಮೂಲಕ ಯಾವುದೇ ನೋಟಿಸನ್ನು ನೀಡಿಲ್ಲ ಎಂದರೆ ಸರಿಯಲ್ಲ. ಸಾಲಗಾರರ ವಿಳಾಸ ಜನಮಕ್ಕಿ ಹೆಗಡೆ ಎಂದ ಸಾಲದ ಅರ್ಜಿಯಲ್ಲಿಯೇ ಸ್ಪಷ್ಟವಾಗಿ ನಮೂದು ಮಾಡಿದ್ದೇವೆ ಎಂದರೆ ಸಾಕ್ಷಿ ಆ ವಿಳಾಸವನ್ನು ಸಾಲಗಾರರೇ ನೀಡಿದ್ದರು ಎಂದು ನುಡಿದಿರುತ್ತಾರೆ . ಆರೋಪಿ ಕೆಎಸ್ ಆರ್ ಟಿಸಿಯಲ್ಲಿ ಕೆಲಸ ಮಾಡುತ್ತಿದ್ದಾರೆ . ಅವರ ವಿಳಾಸ ಕುಮಟಾ ಡಿಪೋ . ಅವರು ಕೆಲಸ ಮಾಡುತ್ತಿದ್ದ

ವಿಳಾಸಕ್ಕೆ ಯಾವುದೇ ನೋಟಿಸನ್ನು ಕಳಿಸಿಲ್ಲ . ಆ ಸಮಯದಲ್ಲಿ ಆ ವಿಳಾಸಕ್ಕೆ ಬ್ಯಾಂಕಿನ ನೋಟಿಸನ್ನು ಕಳುಹಿಸಲು ತೊಂದರೆ ಇರಲಿಲ್ಲ . ಸಾಲಗಾರರಿಗೆ ನಾವು ಬ್ಯಾಂಕಿನ ಮೂಲಕವಾಗಲೀ , ವಕೀಲರ ಮೂಲಕವಾಗಲೀ ನೋಟಿಸನ್ನು ನೀಡಿಲ್ಲ , ಒಂದುವೇಳೆ ಜನಮಕ್ಕಿ ಹೆಗಡೆ ಎಂಬ ವಿಳಾಸಕ್ಕೆ ನೋಟಿಸನ್ನು ನೀಡಿದರೆ ಅದು ಅವರಿಗೆ ಜಾರಿಯಾಗುತ್ತಿತ್ತು ಎಂದರೆ ಸಾಕ್ಷಿ ಅವರು ಕೊಟ್ಟಿರುವ ಆಧಾರ ಕಾರ್ಡ ಅಡ್ರೆಸ್ ಗೆ ನೋಟಿಸ್ ಕಳಿಸಿದ್ದೇವೆ ಎಂದು ನುಡಿದಿರುತ್ತಾರೆ . ಸಾಲಗಾರರ ಆಧಾರ ಕಾರ್ಡನಲ್ಲಿಯೂ ಕೂಡ ಜನಮಕ್ಕಿ ಹೆಗಡೆ ಎಂದು ಇದೆ ಎಂದರೆ ಸರಿಯಲ್ಲ . ದೇವಸ್ಥಾನದ ಹತ್ತಿರ ಹೆಗಡೆ ಎಂದು ನಮೂದಿಸಿ ಬೇರೆ ವ್ಯಕ್ತಿಗೆ ನೋಟಿಸನ್ನು ಜಾರಿ ಮಾಡಿದ್ದೇವೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಆರೋಪಿ ಪರ ವಕೀಲರ ವಿನಂತಿ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.